**3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಳಗಾವಿ**

**ಇವರ ನ್ಯಾಯಾಲಯದಲ್ಲಿ, ಬೆಳಗಾವಿ.**

ಸೇಶನ ಕೇಸ ನಂಃ 155/2020

ಪಿಡಬ್ಲು : 10 ಸಿಡಬ್ಲು : 38

| | | |
|---|---|---|
| ಸಾಕ್ಷಿಯ ಹೆಸರು | : | ಶ್ರೀ. ಕುಮಾರ ಹಿತ್ತಲಮನಿ |
| ತಂದೆಯ ಹೆಸರು | : | ಶ್ರೀ. ಭೀಮಪ್ಪ ಹಿತ್ತಲಮನಿ |
| ವಯಸ್ಸು | : | 52 ವರ್ಷ |
| ಉದ್ಯೋಗ | : | ಪಿ.ಎಸ್.ಐ, ನವನಗರ ಪೋಲಿಸ ಠಾಣೆ, ಬಾಗಲಕೋಟೆ |
| ವಾಸ್ತವ್ಯ | : | ನವನಗರ, ಬಾಗಲಕೋಟೆ |
| ದಿನಾಂಕ | : | 18-02-2026 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು. |

**ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ**

ದಿನಾಂಕಃ 14-10-2019 ರಿಂದ ದಿನಾಂಕಃ 20-09-2020 ರವರೆಗೆ ನಾನು ಕಿತ್ತೂರು ಪೋಲಿಸ ಠಾಣೆಯಲ್ಲಿ ಪಿ.ಎಸ್.ಐ ಆಗಿ ಕರ್ತವ್ಯ ನಿರ್ವಹಿಸಿದ್ದೇನೆ.

2. ದಿನಾಂಕಃ 03-03-2020 ರಂದು ನಾನು ಠಾಣೆಯಲ್ಲಿ ಠಾಣಾಧಿಕಾರಿಯಾಗಿ ಕರ್ತವ್ಯದಲ್ಲಿದ್ದಾಗ ಮಧ್ಯಾಹ್ನ 15:30 ಗಂಟೆ ಸಮಯದಲ್ಲಿ ದೂರುದರರಾದ ಶ್ರೀಮತಿ. ಸಾವಿತ್ರಿ ಬಸವರಾಜ ದೊಡಮನಿ ಎನ್ನುವವರು ಠಾಣೆಗೆ ಹಾಜರಾಗಿ ಲಿಖಿತ ದೂರನ್ನು ಸಲ್ಲಿಸಿದ್ದು, ನಾನು ಅದನ್ನು ಸ್ವೀಕರಿಸಿಕೊಂಡು ಠಾಣಾ ಅಪರಾಧ ಸಂಖ್ಯೆ 24/2020 ರಂತೆ ಭಾರತ ದಂಡ ಸಂಹಿತೆ ಕಲಂ 302, ಕಲಂ 120 ಬಿ ಸಹ ವಾಚಕ ಕಲಂ 34 ಮತ್ತು 3(1)(r), 3(1)(s), 3(2)(va) ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ ದೌರ್ಜನ್ಯ ತಡೆ ಕಾಯ್ದೆ ಅಡಿಯಲ್ಲಿ ಪ್ರಕರಣವನ್ನು ನೊಂದಣಿ ಮಾಡಿದ್ದೇನೆ ಮತ್ತು ಆ ಬಗ್ಗೆ ಪ್ರಥಮ ವರ್ತಮಾನ ವರದಿಯನ್ನು ತಯಾರಿಸಿದ್ದು, ಮೂಲ ದೂರು ಮತ್ತು ಪ್ರಥಮ ವರ್ತಮಾನ

ವರದಿಯನ್ನು ಠಾಣಾ ಸಿಬ್ಬಂದಿ ಪೋಲಿಸ ಪೇದೆ 2568 ಶ್ರೀ.ಎಮ್.ಎಮ್.ದ್ಯಾಮಣ್ಣಗೌಡರ ಅವರ ಮುಖಾಂತರ 16:30 ಗಂಟೆಗೆ 3ನೇ ಹೆಚ್ಚುವರಿ ಸತ್ರ ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟಿದ್ದು, ಅದರ ನಕಲನ್ನು ಮೇಲಾಧಿಕಾರಿಗಳಿಗೆ ಕಳುಹಿಸಿಕೊಟ್ಟಿದ್ದೇನೆ. ಮೂಲ ದೂರು, ಅದರ ಮೇಲಿನ ಹಿಂಬರಹ ಮತ್ತು ಸಹಿಯನ್ನು ಸಾಕ್ಷಿ ಗುರುತಿಸಿದ್ದಾರೆ. ಮೂಲ ದೂರನ್ನು ಈಗಾಗಲೇ ನಿಪಿ-1 ಎಂದು ಗುರುತಿಸಿದ್ದು, ಅದರ ಮೇಲಿರುವ ಹಿಂಬರಹವನ್ನು ನಿಪಿ-1 ಬಿ ಎಂದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ-1 [ಸಿ] ಎಂದು ಗುರುತಿಸಲಾಯಿತು. ಪ್ರಥಮ ವರ್ತಮಾನ ವರದಿಯನ್ನು ನಿಪಿ-58 ಎಂದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ-58 [ಎ] ಎಂದು ಗುರುತಿಸಲಾಯಿತು.

3. ಈ ಪ್ರಕರಣವು ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ ದೌರ್ಜನ್ಯ ತಡೆ ಕಾಯ್ದೆ ಅಡಿಯಲ್ಲಿ ನೊಂದಣಿ ಆಗಿದ್ದರಿಂದ ಹಾಗೂ ಘೋರ ಪ್ರಕರಣ ಆಗಿದ್ದರಿಂದ ಮಾನ್ಯ ಎಸ್.ಪಿ ರವರ ಆದೇಶದ ಮೇರೆಗೆ ದಿನಾಂಕಃ 03-03-2020 ರಂದು ಚಾಸಾಃ 39 ಶ್ರೀ. ಜೆ.ಎಮ್. ಕರುಣಾಕರಶೆಟ್ಟಿ, ಡಿ.ವೈ.ಎಸ್.ಪಿ ಬೈಲಹೊಂಗಲ ಅವರಿಗೆ ಹಸ್ತಾಂತರಿಸಿದ್ದೇನೆ.

4. ದಿನಾಂಕಃ 03-03-2020 ರಂದು ಡಿ.ವೈ.ಎಸ್.ಪಿ ಬೈಲಹೊಂಗಲ ರವರು ನನಗೆ ಈ ಪ್ರಕರಣದ ಆರೋಪಿತರನ್ನು ಪತ್ತೆ ಮಾಡುವಂತೆ ಜ್ಞಾಪನ ಪತ್ರವನ್ನು ನೀಡಿದ್ದರು. ಜ್ಞಾಪನ ಪತ್ರವನ್ನು ನಿಪಿ-59 ಎಂದು, ಅದರ ಮೇಲಿರುವ ಸಾಕ್ಷಿಯ ಸ್ವೀಕೃತಿ ಸಹಿಯನ್ನು ನಿಪಿ-59 [ಎ] ಎಂದು ಗುರುತಿಸಲಾಯಿತು.

5. ದಿನಾಂಕಃ 04-03-2020 ರಂದು ಈ ಪ್ರಕರಣದ 1ನೇ ಆರೋಪಿ ಗೋಪಾಲ ಪಾಗದ, 2ನೇ ಆರೋಪಿ ಮಹಾಂತೇಶ ಪಾಗದ ಮತ್ತು 3ನೇ ಆರೋಪಿ ರೇಣುಕಾ

ಗೋಪಾಲ ಪಾಗದ ರವರನ್ನು ಕಿತ್ತೂರು ಬಸ್ ನಿಲ್ದಾಣದಲ್ಲಿ ಬೆಳಗ್ಗೆ 10:45ಗಂಟೆಗೆ ವಶಕ್ಕೆ ಪಡೆದುಕೊಂಡು 11:00 ಗಂಟೆಗೆ ಚಾಸಾಃ 39 ರವರ ಮುಂದೆ ವರದಿಯೊಂದಿಗೆ ಹಾಜರುಮಾಡಿದ್ದೇನೆ. ವರದಿಯನ್ನು ನಿಪಿ-60 ಎಂದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ-60 [ಎ] ಎಂದು ಗುರುತಿಸಲಾಯಿತು.

6. ನಾನು ವಶಕ್ಕೆ ಪಡೆದುಕೊಂಡು ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. 2 ಮತ್ತು 3ನೇ ಆರೋಪಿತರು ವಿಚಾರಣೆಗೆ ಗೈರು ಹಾಜರಾಗಿದ್ದು, ಅವರ ಗುರುತಿಸುವಿಕೆಯನ್ನು ಅಲ್ಲಗಳೆಯುವುದಿಲ್ಲ ಎಂದು, ಆರೋಪಿತರ ಗೈರು ಹಾಜರಾತಿಯನ್ನು ಮನ್ನಿಸುವಂತೆ ಆರೋಪಿ ಪರ ವಕೀಲರು ಅರ್ಜಿ ಸಲ್ಲಿಸಿದ್ದು, ಪುರಸ್ಕರಿಸಲಾಗಿದೆ. ಸಾಕ್ಷಿ 1ನೇ ಆರೋಪಿಯನ್ನು ನೋಡಿ ಗುರುತಿಸಿದ್ದಾರೆ.

**ಪಾಟೀ ಸವಾಲುಃ ಶ್ರೀ.ಹೆಚ್.ಸಿ.ಎಸ್. ವಕೀಲರಿಂದ ಆರೋಪಿತರ ಪರವಾಗಿ**

ದಿನಾಂಕಃ 14-10-2019 ರಿಂದ ದಿನಾಂಕಃ 20-09-2020 ರವರೆಗೆ ಕೋವಿಡ್ ಸಾಂಕ್ರಾಮಿಕ ರೋಗ ತಡೆಗಟ್ಟುವಿಕೆಯ ಬಗ್ಗೆ ಸರ್ಕಾರದ ನಿಯಮಗಳು ಜಾರಿಯಲ್ಲಿದ್ದವು ಎನ್ನುವುದು ಸರಿ. ಕಿತ್ತೂರು ಗ್ರಾಮ ರಾಷ್ಟ್ರೀಯ ಹೆದ್ದಾರಿಗೆ ಹೊಂದಿಕೊಂಡಂತೆ ಇದೆ ಎನ್ನುವುದು ಸರಿ. ಮತ್ತು ಕಿತ್ತೂರು ಗ್ರಾಮದ ಬಸ್ ನಿಲ್ದಾಣ ರಾಷ್ಟ್ರೀಯ ಹೆದ್ದಾರಿ ಮೇಲೆ ಇದೆ ಎನ್ನುವುದು ಸರಿ.

2. ದಿನಾಂಕಃ 03-03-2020 ರಂದು ನಾನು ಕಿತ್ತೂರು ಸಾರ್ವಜನಿಕ ಆಸ್ಪತ್ರೆಯಿಂದ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಎಮ್.ಎಲ್.ಸಿ ಯನ್ನು ಸ್ವೀಕರಿಸಿಲ್ಲ ಎನ್ನುವುದು ಸರಿ. ದೂರುದಾರರು ಠಾಣೆಗೆ ಮಧ್ಯಾಹ್ನ 15:30 ರ ಸಮಯದಲ್ಲಿ ಹಾಜರಾಗಿ ದೂರು ನೀಡಿದ ಬಗ್ಗೆ ನಾನು ಠಾಣಾ ದಿನಚರಿಯಲ್ಲಿ ನಮೂದು ಮಾಡಿದ್ದೇನೆ.

3. ದಿನಾಂಕಃ 03-03-2020 ರಂದು ಸಂಜೆ 17:00 ಗಂಟೆಗೆ ಡಿ.ವೈ.ಎಸ್.ಪಿ ರವರು ಕಿತ್ತೂರು ಪೋಲಿಸ ಠಾಣೆಗೆ ಬಂದಿದ್ದರು.

4. ದಿನಾಂಕಃ 03-03-2020 ರಂದು 15:30 ಗಂಟೆಗೆ ದೂರನ್ನು ನೊಂದಣಿ ಮಾಡುವ ಪೂರ್ವದಲ್ಲಿ ಬಸವರಾಜ ಎನ್ನುವ ವ್ಯಕ್ತಿ ರಸ್ತೆ ಅಪಘಾತದಲ್ಲಿ ತೀರಿಕೊಂಡಿದ್ದಾನೆ ಎಂದು ನಮ್ಮ ಠಾಣೆ ಮಾಹಿತಿ ಬಂದಿದ್ದರೂ ಸಹ ನಾವು ಅದನ್ನು ಮರೆಮಾಚಿ ದೂರುದಾರರಿಂದ ದೂರನ್ನು ಸ್ವೀಕರಿಸಿಕೊಂಡು ಕೊಲೆ ಪ್ರಕರಣ ಎಂದು ದೂರನ್ನು ನೊಂದಣಿ ಮಾಡಿದ್ದೇನೆ ಎನ್ನುವುದು ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಸವಿತಾ ಕುಮಾರಿ ಎನ್)
3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.